ದಿನಾಂಕ 06-01-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ.ಎಸ್ ಎಲ್ ವಕೀಲರಿಂದಃ-

ಅಗ್ರಿಮೆಂಟ್ ಆದದ್ದು 16.11.2015 ರಲ್ಲಿ . ಅಗ್ರಿಮೆಂಟ್‌ಗೆ ಸಹಿ ಹಾಕಿದ್ದನ್ನು ಬಿಟ್ಟು ಏನು ಮಾತುಕತೆಯಾಯಿತು ಎಂದು ಗೊತ್ತಿದೆ ಎಂದರೆ ಸಾಕ್ಷಿ ದುಡ್ಡು ಚಕ್ಕು ಕೊಟ್ಟದ್ದು ಗೊತ್ತು, ವ್ಯಾಪಾರ ಆಯಿತು ಎಂದು ನುಡಿಯುತ್ತಾರೆ. ಮಾತುಕತೆಯಾದದ್ದು ಕಾಡುಮನೆಯಲ್ಲಿ. ಮಾತುಕತೆ ಅಗ್ರಿಮೆಂಟ್ ಆದ 1 ದಿವಸದ ಮುಂಚೆ ಅಗಿತ್ತು. ಮಾತುಕತೆ 60 ಲಕ್ಷಕ್ಕೆ ಅಗಿತ್ತು. ಆ ಪೈಕಿ 5 ಲಕ್ಷದ 2 ಡಿಡಿ ಗಳು. 1 ವರೆ ಲಕ್ಷ ನಗದು ಹಣ ಕೊಟ್ಟರು. ಡಿಡಿಯನ್ನು ಅಗ್ರಿಮಂಟ್ ಅದ ದಿವಸ ಕೊಟ್ಟರು. ಅಗ್ರಿಮಂಟ್‌ನ್ನು ಓದಿದ್ದೇನೆ. ಕ್ರಯಪತ್ರವನ್ನು 3 ತಿಂಗಳಲ್ಲಿ ಮಾಡುಕೊಡುವಂತೆ ಅಗ್ರಿಮೆಂಟ್ ಆಗಿತ್ತು. ಅಗ್ರಿಮೆಂಟ್ ಕಾಲಕ್ಕೆ ಪ್ರತಿವಾದಿಯ ಬಳಿ ದಾಖಲೆಗಳು ಎಲ್ಲಾ ರೆಡಿ ಇದ್ದರು ಎಂದರೆ ಸರಿ. ವಾದಿಗೆ ಹಣ ಒದಗಿಸಲು ಸಮಯ ಬೇಕಾಗಿತ್ತು ಅದಕ್ಕೆ ಸಮಯ ತೆಗೆದುಕೊಟ್ಟದ್ದು ಎಂದರೆ ಸರಿಯಲ್ಲ.

ಸಮಯವನ್ನು ಏತಕ್ಕೆ ತೆಗೆದುಕೊಂಡದ್ದು ಎಂದರೆ ಸಾಕ್ಷಿ ರಿಜಿಸ್ಟ್ರರ್ ಮಾಡಲು ಎಂದು ನುಡಿಯುತ್ತಾರೆ. 3 ತಿಂಗಳು ಸಮಯ ಕೇಳಿದ್ದು ರಮೇಶ್ ರವರು. ಏತಕ್ಕೆ 3 ತಿಂಗಳು ಸಮಯ ಕೇಳಿದರು ಎಂದರೆ ಸಾಕ್ಷಿ ಬಂದು ರಿಜಿಸ್ಟ್ರರ ಮಾಡಿಕೊಡಲು ಎಂದು ನುಡಿಯುತ್ತಾರೆ. 3 ತಿಂಗಳು ಸಮಯವನ್ನು ತೆಗೆದುಕೊಂಡದ್ದು ಪ್ರತಿವಾದಿಯಲ್ಲ ವಾದಿ ಎಂದರೆ ಸಾಕ್ಷಿ ಪ್ರತಿವಾದಿಯೇ ಎಂದು ನುಡಿಯುತ್ತಾರೆ. 48 ಲಕ್ಷದ 50 ಸಾವಿರ ರೂ ತೆಗೆದುಕೊಂಡು ಕ್ರಯಪತ್ರ ನೋಂದಣಿ ಮಾಡಿಕೊಡಿ ಎಂದು ಪ್ರತಿವದಿಯನ್ನು ಕೇಳಿದ್ದೇವೆ. ಅಗ್ರಿಮೆಂಟ್ ಆದ 3 ತಿಂಗಳ ನಂತರ 48 ಲಕ್ಷದ 50 ಸಾವಿರ ತೆಗೆದುಕೊಂಡು ಹೋಗಿದ್ದೇವು. ಹಣ ತೆಗೆದುಕೊಂಡು ಪ್ರತಿವಾದಿಯ ಬಳಿ ಹೋದದ್ದು ವಾದಿ. ವಾದಿ ಪ್ರತಿವಾದಿಯ ಬಳಿ ಹೋಗುವಾಗ ನನ್ನನ್ನು ಕರೆದಿದ್ದರು. ವಾದಿ ಪ್ರತಿವಾದಿಯ ಬಳಿ 3 ತಿಂಗಳ ನಂತರ ಕ್ರಯಪತ್ರ ಬರೆದುಕೊಡಿ ಎಂದು ಕೇಳಿದ ನಂತರದಲ್ಲಿ

ಎಷ್ಟು ಬಾರಿ ಪ್ರತಿವಾದಿಯ ಬಳಿ ಹೋಗಿ ಕೇಳಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ವಾದಿಯ ಜೊತೆ ಪ್ರತಿವಾದಿಯ ಬಳಿ ಬಾಕಿ ಹಣ ತೆಗೆದುಕೊಂಡು ಹೋದ ದಿನ ಹೊರತು ಪಡಿಸಿದರೇ ನಾನು ಈ ವ್ಯವಹಾರದ ಸಂಬಂಧ ಬಂದಿರುವುದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಿದ ದಿನ ಮಾತ್ರ. ವಾದಿಯ ಬಳಿ ಉಳಿಕೆ 48 ಲಕ್ಷದ 50 ಸಾವಿರ ಹಣವಿಲ್ಲದ ಕಾರಣ ಹಣ ಒದಗಿಸಲು ವಾದಿಯೇ ಅಗ್ರಿಮೆಂಟ್ ನಡಿ 3 ತಿಂಗಳು ಕಾಲಾವಕಾಶ ತೆಗೆದುಕೊಂಡದ್ದು ಎಂದರೆ ಸರಿಯಲ್ಲ. ವಾದಿಯ ಬಳಿ ಬಾಕಿ ಹಣ ಇಲ್ಲದ ಕಾರಣ 2016 ರಿಂದ 2019ರವರೆಗೆ ವಾದಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸಾಕ್ಷಿ ಪ್ರತಿವಾದಿ ಬರಲಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯ ಪತ್ನಿಗೆ ಕ್ಯಾನ್ಸರ ಕಾಯಿಲೆ ಆಗಿದ್ದರಿಂದ ಅದಕ್ಕಾಗಿಯೇ ಪ್ರತಿವಾದಿ ಅಗ್ರಿಮೆಂಟ್ ಬರೆದುಕೊಟ್ಟದ್ದು ಎಂದರೆ ಗೊತ್ತಿಲ್ಲ. ವಾದಿಯ ಬಳಿ ಬಾಕಿ ಹಣ ಇಲ್ಲದೇ 4 ವರ್ಷ ಪ್ರತಿವಾದಿಯನ್ನು ಸತಾಯಿಸಿ ವಾದಿ ಸುಳ್ಳು ದಾವೆ ಸಲ್ಲಿಸಿದ್ದಾರೆಂದರೆ ಸರಿಯಲ್ಲ, ಈ ವಿಚಾರ ಗೊತ್ತಿದ್ದು ಸುಳ್ಳು ಹೇಳುತ್ತಿದ್ದಿರೆಂದರೆ ಸರಿಯಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.